# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. : 04 ಪ್ರಾ.ಸಾ. : 02**

| | | |
|---|---|---|
| ಸಾಕ್ಷಿಯ ಹೆಸರು | : | ಶ್ಯಾಮಲಾ ದೇವಪ್ಪ ಪಟಗಾರ |
| ಗಂಡನ ಹೆಸರು | : | ದೇವಪ್ಪ ಪಟಗಾರ |
| ವಯಸ್ಸು | : | 42 ವರ್ಷ |
| ಕೆಲಸ | : | ಕೂಲಿ |
| ವಾಸ | : | ಬ್ರಹ್ಮೂರು, ತಾಃ ಅಂಕೋಲಾ |

**ದಿನಾಂಕಃ 01-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-5 ರವರು ನನ್ನ ಗಂಡನ ಅಣ್ಣನ ಹೆಂಡತಿ. ಚಾಸಾ-1 ಹಾಗೂ ಚಾಸಾ-9 ರವರ ರವರ ಪರಿಚಯ ಇರುತ್ತದೆ, ಅವರ ಮನೆಯ ಪಕ್ಕದಲ್ಲಿ ನಮ್ಮ ಜಮೀನು ಇರುತ್ತದೆ. ನಮ್ಮ ಜಮೀನಿಗೆ ಹೊಂದಿಕೊಂಡಂತೆ ಅವರಿಗೆ ಸೇರಿದ 2 ಎಕರೆಗಿಂತಲೂ ಹೆಚ್ಚು ಜಮೀನು ಇರುತ್ತದೆ. ನಮ್ಮ ಮನೆಯಿಂದ ಜಮೀನಿಗೆ ಬರಲು 10 ನಿಮಿಷ ಸಮಯ ಆಗುತ್ತದೆ. ನಮ್ಮಗಳ ಜಮೀನಿನ ಪಕ್ಕದಲ್ಲಿಯೇ ಬಸ್ ನಿಲ್ದಾಣ ಇರುತ್ತದೆ. ಬಸ್ ನಿಲ್ದಾಣ ಪಕ್ಕದಲ್ಲಿಯೇ ಚಾಸಾ-1 ರವರ ಮನೆ ಇರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು, ಅವರು ನಮ್ಮ ಊರಿನವರು.

2. ದಿಃ 12-11-2017 ರಂದು ಬೆಳಿಗ್ಗೆ ನಾನು ಹಾಗೂ ನನ್ನ ಅಕ್ಕನಾದ ಚಾಸಾ-5 ರವರು ನಮ್ಮ ಗದ್ದೆಯ ಕೆಲಸಕ್ಕೆ ಹೋಗಿ, ನಂತರ 11-30 ಗಂಟೆ ಸುಮಾರಿಗೆ ಪೇಟೆಗೆ ಹೋಗಲು ಬಸ್ ನಿಲ್ದಾಣದಲ್ಲಿ ನಿಂತಿರುವಾಗ, ಚಾಸಾ-1 ರವರ ಮನೆಯ ಹತ್ತಿರ ಚಾಸಾ-1 ರವರಿಗೂ ಹಾಗೂ ಆರೋಪಿತರ ನಡುವೆ ಗಲಾಟೆಯಾಗುತ್ತಿತ್ತು. ಅವರ ನಡುವೆ ಗಲಾಟೆಯಾಗುತ್ತಿದ್ದ ಕಾರಣ, ನಾವು ಸುಮ್ಮನಾದೆವು. ಆ ನಂತರ ಗಲಾಟೆ ಜೋರಾಗಿ ಕೇಳಿಸಲು ಪ್ರಾರಂಭವಾದಾಗ ನಾನು ಹಾಗೂ ಚಾಸಾ-5 ರವರು ಚಾಸಾ-1 ರವರ ಮನೆಯ ಹತ್ತಿರ ಹೋದೆವು. ಅಲ್ಲಿ ಆರೋಪಿತರು ಚಾಸಾ-1 ರವರಿಗೆ ಬೈಯುತ್ತಿದ್ದರು ಹಾಗೂ 1 ನೇ

ಆರೋಪಿಯು ಚಾಸಾ-1 ರವರನ್ನು ಮನೆಯ ಒಳಗೆ ದೂಡಿ, ಬಾಗಿಲನ್ನು ಹಾಕಿ, ಚಿಲಕ ಹಾಕಿ, ವಾಪಸ್ ಬರುತ್ತಿದ್ದರು, ನಾವು ಚಿಲಕವನ್ನು ತೆಗೆದು, ಚಾಸಾ-1 ರವರ ಬಳಿ ಏನಾಯಿತು ಎಂದು ವಿಚಾರಿಸಿದಾಗ, "ಆರೋಪಿತರು ಬಂದು, ನಮ್ಮ ಗದ್ದೆಯನ್ನು ಉಳುಮೆ ಮಾಡುತ್ತಿದ್ದರು, ನಾನು ಅವರನ್ನು ಯಾಕೆ ಉಳುವೆ ಮಾಡುತ್ತೀರಾ?, ಇದು ನಮ್ಮ ಜಮೀನು ಎಂದು ಕೇಳಿದಾಗ, ಅವರು ನನಗೆ ರಂಡೆ, ಮುದಿ ರಂಡೆ ಎಂದು ಕೆಟ್ಟ ಪದಗಳಿಂದ ಬೈದರು ಹಾಗೂ ನನಗೆ ಮನೆಯ ಒಳಗೆ ದೂಡಿ ಚಿಲಕ ಹಾಕಿದರು ಹಾಗೂ ನಿನ್ನನ್ನು ಸುಮ್ಮನೆ ಬಿಡುವುದಿಲ ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು" ಎಂದು ಹೇಳಿದರು. ಆ ನಂತರ ನಾವು ಪೇಟೆಗೆ ಹೋದೆವು.

3. ದಿಃ 16-11-2017 ರಂದು ಬೆಳಿಗ್ಗೆ 08-00 ಗಂಟೆಗೆ ಪೊಲೀಸರು 1 ನೇ ಆರೋಪಿಯನ್ನು ಪಂಚನಾಮೆಗಾಗಿ ಚಾಸಾ-1 ರವರ ಮನೆಯ ಬಳಿ ಕರೆದುಕೊಂಡು ಬಂದಿದ್ದು, ಸ್ಥಳದಲ್ಲಿ ನಾನು, ಚಾಸಾ-1, ಚಾಸಾ-3, ಚಾಸಾ-5, ಚಾಸಾ-6, ಚಾಸಾ-7, ಚಾಸಾ-8 ಮತ್ತು ಚಾಸಾ-9 ರವರು ಹಾಗೂ ಮತ್ತೊಬ್ಬರು ಮತ್ತು ಪೊಲೀಸರು ಇದ್ದರು. ಆ ಸಮಯದಲ್ಲಿ 1 ನೇ ಆರೋಪಿಯು ಚಾಸಾ-1 ರವರ ಮನೆಯ ಹಿಂದೆ ಇಟ್ಟಿದ್ದ 3 ಲೀಟರ್ ಸೀಮೆಎಣ್ಣೆ ಇರುವ ಒಂದು ಕ್ಯಾನ್, ಒಂದು ಬೆಂಕಿ ಕಡ್ಡಿ ಪೊಟ್ಟಣ ಮತ್ತು ಒಂದು ಕಟ್ಟಿಗೆಗೆ ಬಟ್ಟೆ ಸುತ್ತಿರುವ ಪಂಜುನ್ನು ತೋರಿಸಿ, ಪಿರ್ಯಾದಿಯು ನಮ್ಮ ಮೇಲೆ ದೂರು ನೀಡಿದ ಕಾರಣ, ಆಕೆಯ ಮೇಲೆ ನಮಗೆ ದ್ವೇಷ ಇರುತ್ತದೆ ಹಾಗೂ ಆಕೆಯು ಒಬ್ಬಳೇ ಇರುತ್ತಾಳೆ, ಆದ್ದರಿಂದ ಅವರ ಮನೆಗೆ ಸೀಮೆಎಣ್ಣೆ ಹಾಕಿ ಕೊಲೆ ಮಾಡಬೇಕೆಂದು ದಿಃ 12-11-2017 ರಂದು ರಾತ್ರಿ ತಂದಿಟ್ಟಿರುತ್ತೇನೆ, ಆದರೆ ಆ ದಿನ ಆಕೆ ಮನಯಲ್ಲಿರುವುದಿಲ್ಲ, ಆದ್ದರಿಂದ ಬೆಳಗಿನ ಜಾವ 03-00 ಗಂಟೆ ವರೆಗೆ ಕಾಯಿದಿರುತ್ತೇನೆ, ಆಕೆ ಮನೆಗೆ ಬಂದಿರುವುದಿಲ್ಲ ಹಾಗೂ ಆಕೆಯ ಮನೆಗೆ ಬೀಗ ಹಾಕಿರುತ್ತಾರೆ, 03-00 ಗಂಟೆ ನಂತರ ಜನ ಓಡಾಡುವುದನ್ನು ನೋಡಿ, ನಾನು ತಂದಿದ್ದ ವಸ್ತುಗಳನ್ನು ಅಲ್ಲಿಯೇ ಇಟ್ಟು, ವಾಪಸ್ ಹೋದೆ ಎಂದು ಹೇಳಿರುತ್ತಾನೆ. ಆ ನಂತರ ಪೊಲೀಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ, ಸದರಿ ವಸ್ತುಗಳನ್ನು ತೆಗೆದುಕೊಂಡು ಹೋದರು.

4. ಸ್ಥಳದಲ್ಲಿದ್ದ ಜನರು 1 ನೇ ಆರೋಪಿಯು ಕ್ಯಾನ್ ನ್ನು ಹಿಡಿದುಕೊಂಡು ಓಡಾಡುತ್ತಿದ್ದ ಹಾಗೂ ಚಾಸಾ-1 ರವರನ್ನು ಬಿಡುವುದಿಲ್ಲ ಎಂದು ಮಾತನಾಡಿಕೊಳ್ಳುತ್ತಿದ್ದನ್ನು, ಊರಿನ

ಜನರು ಮಾತನಾಡಿಕೊಳ್ಳುತ್ತಿದ್ದನ್ನು ನಾನು ಕೇಳಿರುತ್ತೇನೆ. ನಾನು ಘಟನೆಯ ಬಗ್ಗೆ ಪೊಲೀಸರು ಮುಂದೆ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-1 ರಿಂದ 3 ವಸ್ತುಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್ ವಕೀಲರಿಂದ**

ಆರೋಪಿತರ ಪರ ವಕೀಲರು ಕಲಂ.231 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಸಾಕ್ಷಿದಾರ 1, 4, 5, 6, 7 ಮತ್ತು 9 ರವರ ಮುಖ್ಯ ವಿಚಾರಣೆ ಆಗುವವರೆಗೆ ಸದರಿ ಸಾಕ್ಷಿದಾರರ ಪಾಟೀ ಸವಾಲನ್ನು ಮುಂದೂಡುವಂತೆ ಕೋರಿಕೊಂಡ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ